**ಆರ್.ಡಬ್ಲ್ಯೂ :2**

**ದಿನಾಂಕಃ 28-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 4 ಮತ್ತು 5 ನೇ ಎದುರುದಾರರ ಪರವಾಗಿ ಶ್ರೀಮತಿ ಪಿ.ಕೆ.ಟಿ ವಕೀಲರಿಂದಃ-**

5. 1964 ರಲ್ಲಿ ಗುಣಾ ನಾಯ್ಕ ರವರು ತೀರಿಕೊಂಡಿರುತ್ತಾರೆ ಎಂದರೆ ಸರಿ. ಅವರು ಮೃತರಾದ ನಂತರ ಗಂಡು ಮಕ್ಕಳಿಗೆ ತಲಾ ¼ ಅಂಶ ಭಾಗವಾಗಿತ್ತು ಎಂದರೆ ಸರಿ. 1989 ರಲ್ಲಿ ನನ್ನ ತಂದೆಯಾದ ತಾಕ್ಯಾ ನಾಯ್ಕ ರವರು ತೀರಿಕೊಂಡಿದ್ದರು ಎಂದರೆ ಸಾಕ್ಷಿಯು ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆಗೆ

ಬಂದಂತಹ ¼ ನೇ ಅಂಶ ನನಗೆ ಬಂದಿರುತ್ತದೆ ಎಂದರೆ ಸರಿ. ಸರ್ವೆ ನಂಃ 533/1 ಅ, 269 ಅ/6, 269 ಅ/10 ಈ ಮೂರು ಸರ್ವೆ ನಂಬರ್ ಗಳನ್ನು ಬಿಟ್ಟು ಉಳಿದ ಸರ್ವೆ ನಂಬರ್ ಗಳ ಜಮೀನು ಮಾತ್ರ ನಮಗೆ ವಾರಸಾ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ಕಾಗದ ಪತ್ರಗಳ ವ್ಯವಹಾರಗಳು ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸೀ–ಬರ್ಡ್ ಗೆ ಸ್ವಾಧೀನಗೊಂಡ ಜಮೀನಿನ ಸರ್ವೆ ನಂಬರ್ ಬೇರೆಯಾಗಿದ್ದು ಹಾಗೂ ಹೆದ್ದಾರಿ ಪ್ರಾಧಿಕಾರಕ್ಕೆ ಸ್ವಾಧೀನಗೊಂಡ ಜಮೀನಿನ ಸರ್ವೆ ನಂಬರ್ ಬೇರೆಯಾಗಿದ್ದು, ಸರ್ವೆ ನಂಃ 533/1 ಅ, 269 ಅ/6, 269 ಅ/10 ರಲ್ಲಿ ¼ ಅಂಶ ಕೇಳುತ್ತಿದ್ದೇನೆ ಹಾಗೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 11 ರಿಂದ 17 ನೇ ಎದುರುದಾರರ ಪರವಾಗಿ ಶ್ರೀ ಆರ್.ಎಸ್.ಹೆಚ್ ವಕೀಲರಿಂದಃ–**

4. ಬುಧಿಯಾ ಗುಣಾ ನಾಯ್ಕ ಹಾಗೂ ಆನಂದಿ ಗಂಡ–ಹೆಂಡತಿಯರು ಎಂದರೆ ಸರಿ. ಅವರಿಗೆ ಎರಡು ಜನ ಗಂಡು ಮಕ್ಕಳು ಅಂದರೆ ವಾಸುದೇವ ಮತ್ತು ಮಹಾದೇವ ಹಾಗೂ ನಾಲ್ಕು ಹೆಣ್ಣು ಮಕ್ಕಳು ಅಂದರೆ ಪಾರ್ವತಿ, ಮಾಲಿ, ದೇವಕಿ ಮತ್ತು ಲೀಲಾ ಎಂದರೆ ಸರಿ. ಅವರ ಪೈಕಿ ಲೀಲಾ ಮೃತಪಟ್ಟಿರುತ್ತಾರೆ ಎಂದರೆ ಸರಿ. ಕಾನೂನಿನ ಪ್ರಕಾರ ಬುಧಿಯಾ ಗುಣಾ ನಾಯ್ಕ ಹಾಗೂ ಆನಂದಿಯವರ ಆಸ್ತಿಯಲ್ಲಿ ಒಟ್ಟು ಆರು ಪಾಲುಗಳು ಆಗಬೇಕು ಎಂದರೆ ಸರಿ. ಬುಧಿಯಾ ಗುಣಾ ನಾಯ್ಕ ರವರಿಗೆ ಆಸ್ತಿಯಲ್ಲಿ ¼ ಭಾಗ ಉಂಟು ಹಾಗೂ ಸದರಿ ¼ ನೇ ಅಂಶದಲ್ಲಿ ಆರು ಭಾಗ ಎಂದರೆ ಸರಿ. ತಲಾ ಆರು ಜನ ಮಕ್ಕಳು 1/6 ರಂತೆ ಭಾಗ ಪಡೆಯುತ್ತಾರೆ ಎಂದರೆ ಸರಿ. ಆನಂದಿಗೆ ಸೇರಿದ ಮನೆ ದೇವಕಿಗೆ ಯಾನೆ ಜ್ಯೋತಿಯವರಿಗೆ ಸೇರಬೇಕು ಎಂದರೆ ಸರಿ.

**ಪಾಟೀ ಸವಾಲುಃ 18 ರಿಂದ 23 ನೇ ಎದುರುದಾರರ ಪರವಾಗಿ ಶ್ರೀ ಕೆ.ಆರ್.ಡಿ ವಕೀಲರಿಂದಃ–**

1. ಸ್ವಾಧೀನಗೊಂಡ ಜಮೀನಿಗೆ ಸಂಬಂಧಿಸಿದಂತೆ 4 ನೇ ಎದುರುದಾರರಾದ ರುಕ್ಮಂಗಲಾ ತಾಕ್ಯಾ ನಾಯ್ಕ ಹಾಗೂ ಬುಧಿಯಾ ಗುಣಾ ನಾಯ್ಕ ರವರು ಅಸಲು ದಾವಾ ನಂಃ 02/1999 ನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ವಿಠ್ಠಲ ಗುಣಾ ನಾಯ್ಕ, ಸದಾನಂದ ಪಾಂಡುರಂಗ ನಾಯ್ಕ ಹಾಗೂ ರಘುವೀರ ಪಾಂಡುರಂಗ ನಾಯ್ಕ ರವರನ್ನು ಪ್ರತಿವಾದಿಗಳನ್ನಾಗಿ ಮಾಡಿದ್ದರು ಎಂದರೆ ಸರಿ. ಅವರ ಪೈಕಿ ಸದಾನಂದ ಪಾಂಡುರಂಗ ನಾಯ್ಕ ರವರು ತೀರಿಕೊಂಡ ಕಾರಣ, ಆತನ ಹೆಂಡತಿಯಾದ ಲಕ್ಷ್ಮಿ ಸದಾನಂದ ನಾಯ್ಕ ರವರನ್ನು ಸದರಿ ದಾವೆಯಲ್ಲಿ ಪ್ರತಿವಾದಿ 2(ಅ) ಎಂದು ಸೇರಿಸಲಾಯಿತು ಎಂದರೆ ಸರಿ. ಸದರಿ ದಾವೆಯಲ್ಲಿ ರುಕ್ಮಂಗಲಾ ತಾಕ್ಯಾ ನಾಯ್ಕ

ರವರಿಗೆ ¼ ಅಂಶ, ಬುಧಿಯಾ ಗುಣಾ ನಾಯ್ಕು ರವರಿಗೆ ¼ ಅಂಶ, ವಿಠ್ಠಲ ಗುಣಾ ನಾಯ್ಕು ರವರಿಗೆ ¼ ಅಂಶ ಮತ್ತು ಪಾಂಡುರಂಗ ನಾಯ್ಕು ರವರಿಗೆ ¼ ಅಂಶ ಹಕ್ಕು ಕೇಳಿದ್ದೆವು ಎಂದರೆ ಸರಿ. ಸದರಿ ದಾವೆ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ದಾವೆಯ ತೀರ್ಪಿನ ವಿರುದ್ಧ ಪ್ರತಿವಾದಿ 2(ಅ) ಮತ್ತು 3 ನೇ ಪ್ರತಿವಾದಿ ಆರ್.ಎ. ನಂಃ 26-2008 ದಾಖಲು ಮಾಡಿದ್ದರು ಎಂದರೆ ಸರಿ. ಸದರಿ ಅಪಿಲ್ ಸಹ ವಜಾಗೊಂಡಿರುತ್ತದೆ ಎಂದರೆ ಸರಿ. ಸದರಿ ಆದೇಶದ ವಿರುದ್ಧ ಆರ್.ಎಸ್.ಎ ದಾಖಲಾಗಿ, ಅದು ಸಹ ವಜಾಗೊಂಡಿರುತ್ತದೆ ಎಂದರೆ ಸರಿ. ಅಸಲು ದಾವಾ ನಂಃ 02/1999 ನ್ನು ಸ್ವಾಧೀನಪಡಿಸಿಕೊಂಡ ಜಮೀನಿಗೆ ಮಾಡಲಾಗಿರುತ್ತದೆ ಹೊರತು ಮನೆಗಳಿಗೆ ಅಲ್ಲ ಎಂದರೆ ಸರಿ. ಜಮೀನಿಗೆ ಬರತಕ್ಕ ಪರಿಹಾರದ ಮೊತ್ತದಲ್ಲಿ ¼ ಅಂಶ ಬರಬೇಕು ಎಂದರೆ ಸರಿ. ಅದರಲ್ಲಿರುವ ಮನೆಗೆ ಸಂಬಂಧಿಸಿದಂತೆ ಯಾವುದೇ ಪರಿಹಾರವನ್ನು ಕೇಳಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ. ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ